OS 184/2013
PW1

ದಿನಾಂಕ 25.09.2018 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರಿದ ಪಾಟೀ ಸವಾಲು : ಶ್ರೀ ಜಿ ಎಂ ಬಿ ವಕೀಲರಿಂದಃ

ವನಜಾ ಪೂಜಾರ್ತಿ, ಭೋಜಾ ಪೂಜಾರಿ, ಬೇಬಿ ಪೂಜಾರ್ತಿ ಮತ್ತು ಗೋಪಲ್ ಪೂಜಾರಿ ರವರುಗಳು ಕೂಸು ಪೂಜಾರ್ತಿ ಯವರ ಮಕ್ಕಳು. ಜಾನಕಿ ಪೂಜಾರ್ತಿಯವರು ಭೋಜಾ ಪೂಜಾರಿಯವರ ಹೆಂಡತಿ ಮತ್ತು ರಮೇಶ್ ಪೂಜಾರಿ ಮತ್ತು ಪ್ರಭಾವತಿ ಹಾಗೂ ಶುಭ ರವರು ಭೋಜ ಪೂಜಾರಿಯವರ ಮಕ್ಕಳು. ಸದ್ರಿ ಭೋಜಾ ಪೂಜಾರಿಯವರಿಗೆ ಪ್ರಭಾವತಿ ಎಂಬ ಮಗಳು ಇದ್ದ ಬಗ್ಗೆ ನನ್ನ ವಕೀಲರಿಗೆ ಅನುಭವ ನೀಡಿರುತ್ತೇನೆ. ನಾನು 1998ನೇ ಇಸ್ವಿಯಲ್ಲಿ ಬೇರೆ ಮನೆ ಮಾಡಿಕೊಂಡು ದಾವಾ ಆಸ್ತಿಯಲ್ಲಿ ವಾಸವಿದ್ದೆ. ನಾನು ಮತ್ತು ನನ್ನ ತಾಯಿಯವರು ಒಳ್ಳೆಯ ಭಾಂದ್ಯವ್ಯದಲ್ಲಿದ್ದೇವು. ದಾವಾ ಆಸ್ತಿಗೆ ಸಂಬಂಧಿಸಿದಂತೆ ಡಿಕ್ಲರೇಶನ್ ಅರ್ಜಿಯನ್ನು ಕೂಸು ಪೂಜಾರ್ತಿಯವರು ನೀಡಿರುತ್ತಾರೆ. ಸದ್ರಿ ಡಿಕ್ಲರೇಶನ್ ಅರ್ಜಿ ವಿಚಾರಣೆಗೆ ಬಾಕಿ ಇರುವಾಗಲೇ ಕೂಸು ಪೂಜಾರ್ತಿಯವರು ಮೃತಪಟ್ಟಿರುತ್ತಾರೆ. ಸದ್ರಿ ಕೂಸು ಪೂಜಾರ್ತಿಯವರು ಮೃತ ಪಟ್ಟ ನಂತರ ನನ್ನ ತಾಯಿಯವರು ಭೂ ನ್ಯಾಯ ಮಂಡಳಿಯಲ್ಲಿ ಅವರ ಪರವಾಗಿ ಹೇಳಿಕೆ ನೀಡಿರುತ್ತಾರೆ. ನನ್ನ ತಾಯಿಯವರು ಕನ್ನಡದಲ್ಲಿ ಸಹಿ ಮಾಡುತ್ತಾರೆ. ಈ ಹಂತದಲ್ಲಿ ವಕೀಲರು ಒಂದು ದಾಖಲೆಯನ್ನು ಸಾಕ್ಷಿಗೆ ತೋರಿಸಲಾಗಿ ಸದ್ರಿ ದಾಖಲೆಯನ್ನು ಅರ್ಥ ಮಾಡಿಕೊಳ್ಳಲು ಬರುವುದಿಲ್ಲ ಎಂದು ನುಡಿಯುತ್ತಾರೆ. ನಾನು 6 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನ್ನ ತಾಯಿಯವರ ಸಹಿಯನ್ನು ನೋಡಿದರೆ ಗುರುತಿಸುತ್ತೇನೆ. ವಕೀಲರು ಒಂದು ದಾಖಲೆಯಲ್ಲಿರುವ ವನಜ ಪೂಜಾರ್ತಿಯವರ ಸಹಿಯನ್ನು ಸಾಕ್ಷಿಗೆ ತೋರಿಸಲಾಗಿ

ಸಾಕ್ಷಿಯು ನನಗೆ ಕನ್ನಡಕ ಇರದೆ ಗುರುತಿಸಲು ಸಾಧ್ಯವಿಲ್ಲ ಎಂದು ನುಡಿಯುತ್ತಾರೆ. ಸದ್ರಿ ಡಿಕ್ಲರೇಶನ್ ಅರ್ಜಿಯ ಮೇರೆಗೆ ಕೂಸು ಪೂಜಾರ್ತಿಯವರ ಹೆಸರಿಗೆ ತೀರ್ಪು ಆಗಿರುತ್ತದೆ ಎಂದರೆ ಸರಿಯಲ್ಲ. ಸದ್ರಿ ಆದೇಶದಂತೆ ನಮೂನೆ-10 ನ್ನು ಕೂಸು ಪೂಜಾರ್ತಿಯವರ ಹೆಸರಿಗೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ಕೂಸು ಪೂಜಾರ್ತಿಯವರು ಮೃತ ಪಟ್ಟ ನಂತರ ಅವರ ವಾರಸುದಾರರಾದ ವನಜಾ ಪೂಜಾರ್ತಿ, ಭೋಜಾ ಪೂಜಾರಿ, ಬೇಬಿ ಪೂಜಾರ್ತಿ ಮತ್ತು ಗೋಪಾಲ್ ಪೂಜಾರಿ ರವರುಗಳ ಹೆಸರುಗಳನ್ನು ಪಹಣಿ ಪತ್ರಿಕೆಯಲ್ಲಿ ನಮೂದಿಸಲಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದ್ರಿ ಭೂ ನ್ಯಾಯ ಮಂಡಳಿಯ ತೀರ್ಪನ್ನು ಮತ್ತು ಪಹಣಿ ಪತ್ರಿಕೆಯಲ್ಲಿನ ನಮೂದುಗಳನ್ನು ಎಲ್ಲಿಯೂ ಪ್ರಶ್ನಿಸಿರುವುದಿಲ್ಲ. ನೀವು ನ್ಯಾಯಾಲಯದಲ್ಲಿ ಹಾಜರುಪಡಿಸಿರುವ ಪಹಣಿ ಪತ್ರಿಕೆಗಳಲ್ಲಿನ ನಮೂದುಗಳು ಸರಿ ಇವೆಯಾ ಎಂಬ ಪ್ರಶ್ನೆಗೆ ಸಾಕ್ಷಿಯು ಕನ್ನಡಕ ಇರದೆ ಹೇಳಲು ಬರುವುದಿಲ್ಲ ಎಂದು ನುಡಿಯುತ್ತಾರೆ.

ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದು ಮುಂದೂಡಲಾಯಿತು.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಎ.ಹೆ.ಸಿ.ನ್ಯಾ ಮತ್ತು ಪ್ರ ದ ನ್ಯಾ ದಂ,
ಕಾರ್ಕಳ.